ಕೊಡಗು ಜಿಲ್ಲೆಯಿಂದ ಅಬಕಾರಿ ಇಲಾಖೆಗೆ ಬರುವ ಆದಾಯದ ಬಗ್ಗೆ.

೨೧೩೧. ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ).—ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಅಬಕಾರಿ ಇಲಾಖೆಯಿಂದ ಬಂದ ಒಟ್ಟು ಆದಾಯ ವೆಷ್ಟು ?

ಆ) ಕೊಡಗು ಜಿಲ್ಲೆಯಿಂದ ಬಂದ ಒಟ್ಟು ಆದಾಯವೆಷ್ಟು ?

ಇ) ರಾಜ್ಯಾದ್ಯಂತ ಎರಡನೇ ದರ್ಜೆ ಮಾದಕ ಪಾನೀಯ ಮಾರಾಟ ಮಾಡುವುದನ್ನು ಕಂಡು ಹಿಡಿದು ದಾಖಲು ಮಾಡಲಾಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು ?

ಈ) ಈ ಪೈಕಿ ಸರ್ಕಾರದವರು ಕ್ರಮ ಕೈಗೊಂಡಿರುವ ಮೊಕದ್ದಮೆಗಳು ಎಷ್ಟು ?

(ಜಿಲ್ಲಾವಾರು ವಿವರ ನೀಡುವುದು)

ಶ್ರೀ ತಿ. ಬಿ. ಇನಾಂದರ್(ರಾಜ್ಯ ಅಬಕಾರಿ ಸಚಿವರು).—

ಅ) ೬೬೩.೪೩ ಕೋಟಿ ರೂಪಾಯಿಗಳು.

ಆ) ೮.೧೧ ಕೋಟಿ ರೂಪಾಯಿಗಳು.

ಇ) ಈಗಿರುವ ಮಾಹಿತಿಯ ಪ್ರಕಾರ ಈ ತರಹದ ೨೧ ಗುನ್ನೆಗಳನ್ನು ೧೯೮೭–೮೮ನೇ ಸಾಲಿನಲ್ಲಿ ದಾಖಲು ಮಾಡಲಾಗಿದೆ.

ಈ) ಒಟ್ಟು – ೨೧

ಜಿಲ್ಲಾವಾರು ವಿವರ ಈ ಕೆಳಗೆ ಕಂಡಂತೆ ಕೊಡಲಾಗಿದೆ.

೧.	ಬೆಂಗಳೂರು	–	೧೧
೨.	ಶಿವಮೊಗ್ಗ	–	೨
೩.	ಹಾಸನ	–	೧
೪.	ಚಿತ್ರದುರ್ಗ	–	೧
೫.	ಉತ್ತರ ಕನ್ನಡ	–	೧
೬.	ತುಮಕೂರು	–	೨
೭.	ಬಿಜಾಪುರ	–	೨
೮.	ಮಂಗಳೂರು	–	೧